ಸಭೆಯು 11.30ಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.

1. ವರದಿಯನ್ನೊಪ್ಪಿಸುವುದು.

2006–7ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 34ನೇ ವರದಿ

ಅಧ್ಯಕ್ಷರು: ಎನ್. ಯೋಗೀಶ್ ಭಟ್, ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ ಇವರ ಹೆಸರಿನಲ್ಲಿರುವ 2006–07ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 34ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು(ಕೈಗಾರಿಕಾ ಸಚಿವರು) (ಶ್ರೀ ಬಿ.ಎಸ್ ಯಡಿಯೂರಪ್ಪ, ಉಪಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, 2004ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಸಂರಕ್ಷಣೆ ಅಧಿನಿಯಮ 21(2)ರ ಪ್ರಕರಣದ ಮೇರೆಗೆ : ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ನಿಯಮ 2006 ನ್ನು ದಿನಾಂಕ 05.02.2007ಕ್ಕೆ ಅನ್ವಯವಾಗುವಂತೆ ಹೊರಡಿಸಲಾದ ಅಎ 44 ಟಿ ಎ ಆರ್ 2006ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು

3. ನಿಲುವಳಿ ಸೂಚನೆ ಮೇಲೆ ಚರ್ಚೆಗೆ ಅನುಮತಿ ಕೋರಿಕೆ.

ವಿಷಯ: ನಂಜುಂಡಪ್ಪನವರ ವರದಿ ಅನುಷ್ಠಾನದ ಬಗ್ಗೆ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಸುಮಾರು ಐದು ಸಲ ಈ ನೋಟೀಸನ್ನು ಕೊಟ್ಟಿದ್ದೆ. ಆದರೆ ಅದು ಕಾರಣಾಂತರದಿಂದ ಬರಲಿಲ್ಲ. ಸದನ ಇನ್ನು ಎರಡು ದಿವಸ ಮಾತ್ರ ಇದೆ. ನಾವು ಹೈದರಾಬಾದ್–ಕರ್ನಾಟಕದ ಎಲ್ಲಾ 14 ಜನ ಶಾಸಕರು ಸಹಿ ಹಾಕಿ ತಮಗೆ ಒಂದು ನೋಟೀಸನ್ನು ಕೊಟ್ಟಿದ್ದೇವೆ ದಯಮಾಡಿ ನಮ್ಮ ಹಿರಿಯ ನಾಯಕರಾದ ಖರ್ಗೆಯವರು ಮಾತನಾಡುತ್ತಾರೆ. ದಯಮಾಡಿ ತಾವು ಅದಕ್ಕೆ ಅವಕಾಶ ಮಾಡಿಕೊಟ್ಟು ತಮಗೆ ಮನವರಿಕೆಯಾದರೆ ಚರ್ಚೆಗೆ ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಎರಡು ದಿವಸ ಸದನ ಮುಗಿದ ಮೇಲೆ ಏನು ಸರ್ಕಾರ ನಂಜುಂಡಪ್ಪ ವರದಿ ಅನುಷ್ಠಾನ

ಮಾಡುತ್ತೇನೆ ಎಂದು ಘೋಷಣೆ ಮಾಡಿದೆ ಆದರೆ ದಾರಿ ಬಿಟ್ಟು ಇದು ಅಡ್ಡಾದಿಡ್ಡಿಯಾಗಿ ಪಕ್ಷಪಾತದ ಮೇಲೆ ಮನಸ್ಸಿಗೆ ಬಂದಂತೆಲ್ಲಾ priority ಬಿಟ್ಟು ಇದೆಲ್ಲವನ್ನು ಏನು ಖರ್ಚು ಮಾಡುತ್ತಿದ್ದಾರೆ, ದಯಮಾಡಿ ನಾನು ವಿನಂತಿ ಮಾಡುತ್ತೇನೆ, ತಾವು ಇವತ್ತು ನಮ್ಮ ಸಹಾಯಕ್ಕೆ ಬರಬೇಕು. ಇಲ್ಲದಿದ್ದರೆ ಬಹಳ ದೊಡ್ಡ ಕಷ್ಟವಾಗುತ್ತಿದೆ ನಮಗೆ. ನಾನು ಇದರ ಬಗ್ಗೆ 5 ನಿಮಿಷದಲ್ಲಿ ಸಬ್‌ಮಿಸನ್ ಮಾಡಿಸಿಬಿಡುತ್ತೇನೆ.

ಅಧ್ಯಕ್ಷರು: ನಿಮ್ಮ adjournment motion ಏನು ಎಂಬುದನ್ನು ನೋಡಿದೆ. ಇದು Section 60 ಅನ್ನು attract ಮಾಡುವುದಿಲ್ಲ. ಇದು ಯಾವುದೇ emergency ಯದಲ್ಲ. ಈ ವಿಷಯದ ಬಗ್ಗೆ ಇಲ್ಲಿ ಬಹಳಷ್ಟು ಸಲ ಚರ್ಚೆಯಾಗಿದೆ. ನಂಜುಂಡಪ್ಪನವರ ವರದಿ ಸರಿಯಾದ ರೀತಿಯಲ್ಲಿ ಜಾರಿಗೆ ಬಂದಿಲ್ಲ, ಅಸಮತೋಲನವಾಗಿದೆ ಮುಂತಾದ ವಿಚಾರದ ಬಗ್ಗೆ ಚರ್ಚೆಯಾಗಿದೆ. ಆದ್ದರಿಂದ ಇದು adjournment motionಗೆ ಅನ್ವಯವಾಗುವುದಿಲ್ಲ. ಆದ್ದರಿಂದ ನಾನು ಇದನ್ನು adjournment motionನಲ್ಲಿ ಅವಕಾಶ ಕೊಡಲು ಆಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: Urgent ಇಲ್ಲ ಅಥವಾ ಇದು ಮಹತ್ವದಾಗಿಲ್ಲವೆಂದು ಹೇಳಲು ಆಗುವುದಿಲ್ಲ. ನಾವು ಬಜೆಟ್ ತಯಾರು ಮಾಡುವುದೇ ಈಗ. So naturally ಬಜೆಟ್ ತಯಾರು ಮಾಡುವಾಗಲೇ ನಂಜುಂಡಪ್ಪನವರ ವರದಿಯನ್ನು ಗಮನದಲ್ಲಿ ಇಟ್ಟುಕೊಂಡು ಮಾಡಿದರೆ ಅದಕ್ಕೆ ಅರ್ಥ ಬರುತ್ತದೆ. ಅದನ್ನು ನಮಗೆ ಅಥವಾ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಾದರೆ ಅದರ ಮೇಲೆ ಬೆಳಕು ಚೆಲ್ಲಬೇಕಾಗುತ್ತದೆ. ಇದು ಕೇವಲ ಹೈದ್ರಾಬಾದ್ ಕರ್ನಾಟಕದ ಪ್ರಶ್ನೆಯಲ್ಲ. ನಂಜುಂಡಪ್ಪನವರ ವರದಿಯಲ್ಲಿ 114 ತಾಲ್ಲೂಕುಗಳು ಬರುತ್ತವೆ. ಅದರಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕು ಹೈದ್ರಾಬಾದ್–ಕರ್ನಾಟಕ ಇರಬಹುದು. ಆದರೆ ಇಡೀ ರಾಜ್ಯದ 177 ತಾಲ್ಲೂಕಿನಲ್ಲಿ 114 ತಾಲ್ಲೂಕುಗಳ ಬಗ್ಗೆ ಈ ಸಮಸ್ಯೆ ಇದೆ. ಆದ್ದರಿಂದ ತಾವು ದಯವಿಟ್ಟು ಏನಾದರೂ ಅವಕಾಶ ಮಾಡಿಕೊಟ್ಟರೆ ಯಾವ ರೀತಿಯಾಗಿ ಅಲೊಕೇಷನ್ ಆಗಿದೆ, ಯಾವ ರೀತಿಯಾಗಿ ಅವರು ಹೇಳಿದ್ದಾರೆ, ಮುಂದೆ ಇದನ್ನು ಯಾವ ರೀತಿಯಾಗಿ ಮಾಡಬೇಕು, ಸರಿಪಡಿಸಬೇಕು, even supplementary budget ಇನ್ನೂ pass ಆಗಿಲ್ಲ, naturally supplementary budget ನಲ್ಲೂ ಅವರು ಸರಿಪಡಿಸಿಕೊಳ್ಳಬಹುದು. ಇದಕ್ಕೆ ಕನ್‌ವಿನ್ಸ್ ಆದರೆ, ದಯವಿಟ್ಟು ಇದಕ್ಕೆ ಒಂದು ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ನಮ್ಮೆಲ್ಲರ ಅಭಿಪ್ರಾಯ. ತಮಗೂ ಗೌರವ ಬರುತ್ತದೆ.

ಅಧ್ಯಕ್ಷರು: ನಿಯಮ 60ರ ಅಡಿಯಲ್ಲಿ ಇದನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ಅನೇಕ ಬಾರಿ ಅನೇಕ ರೂಪಗಳಲ್ಲಿ ಚರ್ಚೆಯಾಗಿದೆ. ಆ ಕಾರಣದಿಂದ ನಾನು ಇದನ್ನು ನಿಯಮ 60ರ ಅಡಿಯಲ್ಲಿ ಅವಕಾಶ ಮಾಡಿಕೊಡುವುದಿಲ್ಲ. ಆದ್ದರಿಂದ ಬೇರೆ ರೂಪದಲ್ಲಿ ತನ್ನಿ. ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಸರ್ಕಾರ ಉತ್ತರ ಹೇಳಲಿ. ಆದರೆ ಇದು ನಿಯಮ 60ರ ಕೆಳಗಡೆ ಬರುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಅದನ್ನು ನಿಯಮ 69ರ ಅಡಿಯಲ್ಲಿ ತನ್ನಿ.

ಅಧ್ಯಕ್ಷರು: ನಾನು ಅದನ್ನು convert ಮಾಡುವುದಿಲ್ಲ. ನೀವು 69ರ ಕೆಳಗೆ ಒಂದು ನೋಟೀಸ್ ಕೊಡಿ. Definitely I will considered. I will allot the time. ಆದರೆ ನಿಯಮ 60ರ ಅಡಿಯಲ್ಲಿ ಇದನ್ನು ತೆಗೆದುಕೊಳ್ಳಲು ಬರುವುದಿಲ್ಲ. ಆದ್ದರಿಂದ ಇದನ್ನು ತಳ್ಳಿಹಾಕಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ: ತಮಗೆ over ruling ಮಾಡಲು ಅಧಿಕಾರ ಇದೆ.

ಅಧ್ಯಕ್ಷರು: ಅಧಿಕಾರದ ಪ್ರಶ್ನೆಯಲ್ಲ. ನಿಮಗೆ ನಿಯಮ 69ರ ಅಡಿಯಲ್ಲಿ ಒಂದು ನೋಟೀಸ್ ಕೊಡಲು ಆಗುವುದಿಲ್ಲವೇ? ನಿಯಮ 60ರ ಕೆಳಗೆ ಇದು ಬರುವುದಿಲ್ಲವೆಂದು ನಾನು ತಳ್ಳಿಹಾಕಿದ್ದೇನೆ. ಆದ್ದರಿಂದ ನಿಯಮ 69ರ ಅಡಿಯಲ್ಲಿ ಒಂದು ನೋಟೀಸ್ ಕೊಡಿ. ಅನೇಕ ಸಲ ಈ ಹಿಂದೆ ಈ ಮನೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ, ಬೇಡಿಕೆಯ ಮೇಲೆ ಚರ್ಚೆಯಾಗುವಾಗ ಆಗಿದೆ, ಆ ರೀತಿ ಚರ್ಚೆಯಾಗಿದ್ದರೂ ನಿಯಮ 60ರ ಅಡಿಯಲ್ಲಿ ಅವಕಾಶ ಕೊಡಿ ಎಂದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ: ದಿಢೀರ್ ಎಂದು ಡಾ:ನಂಜುಂಡಪ್ಪನವರ ವರದಿಯ ಬಗ್ಗೆ ಚರ್ಚೆಗೆ ತಂದಿರುವ ಪ್ರಸ್ತಾಪದ ಬಗ್ಗೆ ತಾವು ಯಾವ ರೂಪದಲ್ಲಿ ತಂದರು ಕೂಡ ಸರ್ಕಾರ ಚರ್ಚೆ ಮಾಡಿ ಸ್ಪಷ್ಟವಾದ ಉತ್ತರ ಕೊಡಲು ತಯಾರಿದೆ. ಅಧ್ಯಕ್ಷರೆ, ತಾವು ಯಾವ ರೂಪದಲ್ಲೇ ತನ್ನಿ.

ಶ್ರೀ ಬಿ. ಆರ್.ಪಾಟೀಲ್: ಸರ್ಕಾರ ತಯಾರಾಗಬೇಕಾದರೆ ತಾವು ಏಕೆ ತೆಗೆದುಕೊಳ್ಳುವುದಿಲ್ಲ?

ಅಧ್ಯಕ್ಷರು: ಇದರ ಬಗ್ಗೆ ನಿಯಮ 69ರ ಕೆಳಗೆ ನೋಟೀಸ್ ಕೊಡಿ. ನಾನು ಸಮಯ ನಿಗದಿ ಮಾಡುತ್ತೇನೆ. ಒಟ್ಟಿನಲ್ಲಿ ನಿಮಗೆ ಇದರ ಬಗ್ಗೆ ಚರ್ಚೆಯಾಗಬೇಕು. ತಾವು ಈ ರೀತಿ ಮಾಡಿದರೆ ಸಮಯ ನಷ್ಟವಾಗುತ್ತದೆ. ಇದು 60ರ ಅಡಿಯಲ್ಲಿ ಬರುವುದಿಲ್ಲ. ಆಗಲೆ ಅದನ್ನು ನಾನು ತಳ್ಳಿಹಾಕಿದ್ದೇನೆ. ಆದ್ದರಿಂದ ನಿಯಮ 69ರ ಅಡಿಯಲ್ಲಿ ಒಂದು ನೋಟೀಸ್ ಕೊಡಿ.

(ಗೊಂದಲ)

ಶ್ರೀ ಬಿ. ಆರ್.ಪಾಟೀಲ್: ನಮ್ಮ ಸಮಸ್ಯೆ ಏನೆಂದರೆ ಇನ್ನು ಎರಡು ದಿವಸ ಮಾತ್ರ ಸದನ ನಡೆಯುತ್ತದೆ. ಇನ್ನು ಅನೇಕ ಬಿಲ್ಲುಗಳು ಬರುವುದಿದೆ.

ಅಧ್ಯಕ್ಷರು: ಆ ರೀತಿ ನನಗೂ ಸಮಸ್ಯೆ ಇದೆ. ಇದು ನಿಯಮ 60 ಅಡಿಯಲ್ಲಿ ಬರುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಈ ಒಂದು ಚರ್ಚೆ ತಾವು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಯಾವುದರ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ನಿಯಮಾವಳಿಯನ್ನು ನೀವೇ ನಿಗದಿ ಮಾಡಿ. ದಯವಿಟ್ಟು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ನಂಜುಂಡಪ್ಪನವರ ವರದಿಯಲ್ಲಿ ಏನಿದೆ ಎಂಬುದು ಈ ನಾಡಿನ ಜನತೆಗೆ ಗೊತ್ತಾಗಬೇಕು. ಮುಖ್ಯಮಂತ್ರಿಯವರ ಕ್ಷೇತ್ರವೇ ಈ ವರದಿಯಲ್ಲಿ ಸೇರಿದೆ. ಬಹಳ ವರ್ಷ ಅಧಿಕಾರದಲ್ಲಿ ಇದ್ದವರ ಕ್ಷೇತ್ರಗಳು ಸೇರಿದೆ. ಇದು ಹಿಂದುಳಿದಿರಲು ಏನು ಕಾರಣ? ಇವೆಲ್ಲವೂ ಹೊರಕ್ಕೆ ಬರಬೇಕು. ಯಾವುದು ಹಿಂದುಳಿದಿದೆ ಅದಕ್ಕೆ ಈ ರಾಜ್ಯದ ಸಹಾಯಗಳು ಪೂರ್ಣವಾಗಿ ಹೋಗಬೇಕು. ಅದು ಬಿಟ್ಟು 24 ಗಂಟೆ ನಂಜುಂಡಪ್ಪ ವರದಿ ಜಪ ಮಾಡಿಕೊಂಡಿದ್ದರೆ..

ಶ್ರೀ ಬಿ. ಆರ್.ಪಾಟೀಲ್: ಇದು ದಿಕ್ಕು ತಪ್ಪಿಸುವ ಕೆಲಸವಾಗುತ್ತಿದೆ. ಹಳೆಯ ಮೈಸೂರಿನವರಿಗೆ ನಂಜುಂಡಪ್ಪ ವರದಿಯ ಬಗ್ಗೆ ಕಾಳಜಿ ಇಲ್ಲ. ಇವರು ಕರ್ನಾಟಕವನ್ನು ಭಾಗ ಮಾಡುವ ಮಾತನ್ನು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು: ಇದು ನಿಯಮ 60ರ ಅಡಿಯಲ್ಲಿ ಬರುವುದಿಲ್ಲ. ಆದ್ದರಿಂದ ನಿಯಮ 69ರ ಕೆಳಗೆ ಒಂದು ನೋಟೀಸ್ ಕಳುಹಿಸಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಆಗ ಇದು ಏಕೆ ಜಾರಿಗೆ ಬರಲಿಲ್ಲ? ಈಗ ಕೇಳುತ್ತಿರುವುದು ಸರಿಯಲ್ಲ.

ಅಧ್ಯಕ್ಷರು: ದಯಮಾಡಿ ನೀವು ಕುಳಿತುಕೊಳ್ಳಿ. ಇದು 60ರ ಅಡಿಯಲ್ಲಿ ಬರುವುದಿಲ್ಲವೆಂದು ನಾನು ಆಗಲೇ ಸ್ಪಷ್ಟವಾಗಿ ಹೇಳಿದ್ದೇನೆ. 69ರ ಕೆಳಗೆ ನೋಟೀಸ್ ಕೊಡಿ ನಾನು ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ದಯಮಾಡಿ ಕೂರಿ. ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಬಿ. ಆರ್.ಪಾಟೀಲ್: ತಾವೇ ಅದನ್ನು convert ಮಾಡಿ. ಆ ರೀತಿ ಮಾಡಿರುವ ಅನೇಕ ನದರ್ಶನವಿದೆ. ತಮಗೆ ಅಧಿಕಾರ ಇದೆ.

ಅಧ್ಯಕ್ಷರು: ಒಂದು ನೋಟೀಸ್ ಎಂದರೆ ನೀವು ಕೊಡಲು ready ಇಲ್ಲ. ನೀವು 69ರ ಅಡಿಯಲ್ಲಿ ಒಂದು ನೋಟೀಸ್ ಕೊಟ್ಟರೆ ಏನಾಗುತ್ತದೆ? ಒಂದು ನೋಟೀಸ್ ಕೊಡಿ. ಈಗ ನಿಯಮ 69ರ ಕೆಳಗೆ ಸಾರ್ವಜನಿಕ ಮಹತ್ವದ ವಿಷಯವೇನು convert ಆಗಿ S.E.Z.Y ದು ಆಗಿತ್ತು, ಅದರ ಬಗ್ಗೆ ಮುಖ್ಯಮಂತ್ರಿಗಳು ಮಧ್ಯಾಹ್ನ ಬರುತ್ತಾರಂತೆ. ಅದರ ಬಗ್ಗೆ ಇಬ್ಬರು ಸದಸ್ಯರು ಮಾತನಾಡುವುದು ಎಂದು ಇದೆ. ಆದ್ದರಿಂದ ಅವರು ಬಂದ ಮೇಲೆ ಮಾತನಾಡಿ. ಅವರು ಉತ್ತರ ಕೊಡಲಿ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಮಧ್ಯಾಹ್ನ ಬರುತ್ತಾರೆ. ಆ ಕಾರಣದಿಂದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಇಬ್ಬರು ಸದಸ್ಯರು ಮಾತನಾಡುವುದೆಂದು ಇದೆ. ಅವರು ಬಂದ ಮೇಲೆ ಮಾತನಾಡಲಿ, ನಂತರ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ಮಧ್ಯಾಹ್ನ 2.30 ಗಂಟೆಗೆ ಬರುತ್ತೇನೆಂದು ಹೇಳಿದ್ದಾರೆ. ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾವು Notice ಕೊಡುತ್ತೇವೆ. ತಾವು ದಯಮಾಡಿ ನಾಳೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಕೊಡಿ, ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾಗಿದ್ದು, ನಾವು ಎಲ್ಲಾ ಸಹಿ ಹಾಕಿ ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು: ತಾವು ಕೊಡಿ, ನಾನು ಟೈಮ್ ಕೊಡುತ್ತೇನೆ. ನಾನು ಒಪ್ಪಿಕೊಂಡಿದ್ದೇನಲ್ಲಾ..

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವರಾಜ ರಾಯರೆಡ್ಡಿಯವರು S.E.Z. ಮೇಲೆ ಮಾತನಾಡುತ್ತಾರಂತೆ.

ಅಧ್ಯಕ್ಷರು: ತಾವು ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಇಲ್ಲಿ Industries Minister ಇದ್ದಾರೆ, ಬೇರೆ Minister ಗಳು ಇದ್ದಾರೆ. ಮಾತನಾಡೋಣ, ಮಾನ್ಯ ಮುಖ್ಯಮಂತ್ರಿಯವರು ಬರಲಿ ಬಿಡಿ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ, ಇಬ್ಬರಿಗೆ ಮಾತನಾಡುವುದಕ್ಕೆ ಅವಕಾಶವೆಂದು ನಿನ್ನೆ ತೀರ್ಮಾನವಾಗಿದೆ. ಅವರು ಬಂದಮೇಲೆ ಮಾತನಾಡಿ, ಅವರು ಉತ್ತರವನ್ನು ಕೊಡಲಿಯೆಂದು ನಾನು ಹೇಳುವಂಥಾದ್ದು.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರು ಬರಲಿ ಬಿಡಿ. ನಾವು ಮಾತನಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುವುದೇನೆಂದರೆ, ನೀವು ಈ ವಿಷಯಕ್ಕೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಟ್ಟರೆ, supplementary budget ನಲ್ಲಿ ಆದರೂ ಅವರು ಸರಿಪಡಿಸಬಹುದೆನ್ನುವಂಥಾದ್ದು ನಮ್ಮೆಲ್ಲರ ಅಭಿಪ್ರಾಯವಿದೆ. ಬಜೆಟ್ ಮೇಲೆ ತೊಂದರೆಯಾಗಿದೆ, ಮತ್ತು ಅನೇಕ ಸಾರಿ indiscriminately grant ಮೊದಲೇ allotment ಮಾಡಿಕೊಂಡಿದ್ದಾರೆ. ಈಗ ಅವೆಲ್ಲಾ appendix ನಲ್ಲಿ ಈಗ ಬಂದಿದೆ. ಈಗ ಅದನ್ನು ಸರಿಪಡಿಸಬೇಕೆಂದರೆ, ಈ supplementary grantನಲ್ಲಿ ಅವರು ಬಜೆಟ್‌ನಲ್ಲಿ ಮಾಡಬೇಕು. ಅದಕ್ಕಾಗಿ ತಾವು ಕೇವಲ ಹೈದ್ರಾಬಾದ್‌ನ ಕರ್ನಾಟಕವೆಂದರೆ, ಮಾನ್ಯ ಬಿ. ಆರ್.ಪಾಟೀಲ್, ಶ್ರೀ ವೈಜನಾಥ್ ಪಾಟೀಲ್, ನಾವು ಮಾತನಾಡುತ್ತೇವೆಂದು ತಿಳಿದುಕೊಳ್ಳುವುದು. ಇದರಲ್ಲಿ 114 ತಾಲ್ಲೂಕುಗಳು ಇವೆ.

ಅಧ್ಯಕ್ಷರು: ಆಯಿತು, ನಾನು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೆನಲ್ಲಾ, ಅವರು notice ಕೊಡಬೇಕೆಂದು ಹೇಳಿದ್ದೆನಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈಗ ನೀವು allow ಮಾಡದೇ ಹೋದರೆ, " ಗಾಡಿ ಹೋದ ಮೇಲೆ ಟಿಕೇಟ್ ತೆಗೆದುಕೊಂಡ ಹಾಗೆ ಆಗುತ್ತದೆ."

ಅಧ್ಯಕ್ಷರು: ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹೌದು, ಬಜೆಟ್ pass ಆಗಿ ಹೋದ ಮೇಲೆ ನಾವು ಹೇಳಿದರೂ ಉಪಯೋಗ ಆಗುವುದಿಲ್ಲ.

ಅಧ್ಯಕ್ಷರು: ಇಲ್ಲ, ಬೇಕಾದರೆ ಮೊದಲೇ ತೆಗೆದುಕೊಳ್ಳೋಣ. ನಾನು ಹೇಳುತ್ತೇನೆ. ತಾವು ಒಂದು notice ಕೊಡಿ. ಮಾನ್ಯ ಬಸವರಾಜ ರಾಯರೆಡ್ಡಿಯವರೆ, ನೀವು ಮಧ್ಯಾಹ್ನ ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಪ್ರಾರಂಭ ಮಾಡೋಣ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ಒಂದು ಸಣ್ಣ ವಿಚಾರಕ್ಕೆ ತಾವು ಏಕೆ ನೋವು ಮಾಡುತ್ತಿದ್ದೀರಿ. ನಾವು ಈ ವಿಷಯದ ಬಗ್ಗೆ ಕೊಟ್ಟಿದ್ದೇವೆ.

ಅಧ್ಯಕ್ಷರು: ಇದು ಸಣ್ಣ ವಿಚಾರವಲ್ಲ. ನಾನು ನೀವು ಕೊಟ್ಟಿರುವುದರಲ್ಲಿ ಬರುವುದಿಲ್ಲವೆಂದು ತಳ್ಳಿ ಹಾಕಿದ್ದೇನೆ. ಮಾನ್ಯ ಪಾಟೀಲ್‌ರೆ, ನೀವು ಮತ್ತೆ ಮತ್ತೆ argue ಮಾಡಬೇಡಿ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ಅನೇಕ ಸಂದರ್ಭಗಳಲ್ಲಿ ಇದನ್ನು convert ಮಾಡಿದ್ದೀರಿ.

ಅಧ್ಯಕ್ಷರು: ನೀವು ಮತ್ತೆ ಮತ್ತೆ argue ಮಾಡಬೇಡಿ, ತಾವು ಒಂದು notice ಕೊಡಿ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು rule ನಲ್ಲಿ convert ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಕಳುಹಿಸಿಕೊಟ್ಟಿದ್ದೇನೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಹಿ ಮಾಡಿದ್ದಾರೆ. ಈ ವಿಷಯ important ಇದೆ.

ಅಧ್ಯಕ್ಷರು: ಹೌದು, important ಇದೆ. ಇದೇ ಸದನದಲ್ಲಿ ಇದೇ ಅಧಿವೇಶನದಲ್ಲಿ, ಅನೇಕ ರೂಪದಲ್ಲಿ ಅನೇಕ ಸಾರಿ ಚರ್ಚೆಯಾಗಿದೆ.

ಆದುದರಿಂದ ಅದು ನಿಯಮ 60ರ ಕೆಳಗೆ ಬರುವುದಿಲ್ಲ, ಅದಕ್ಕೋಸ್ಕರ ನಾನು ಅದನ್ನು ತಳ್ಳಿ ಹಾಕಿದ್ದೇನೆ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಬಜೆಟ್‌ನಲ್ಲಿ mention ಮಾಡಿಲ್ಲ. ಪೂರಕ ಅಂದಾಜುನಲ್ಲಿ mention ಮಾಡಿಲ್ಲ.

ಅಧ್ಯಕ್ಷರು: ಇದು ನಿಯಮ 60ರ ಕೆಳಗೆ ಬರುವುದಿಲ್ಲ, ನಿಯಮ 69ರ ಕೆಳಗೆ notice ಕೊಡಿಯೆಂದು ಹೇಳಿದ್ದೇನೆ. ನೀವು ಮತ್ತೆ ಮತ್ತೆ ಏಕೆ ಈ ರೀತಿ ಮಾಡುತ್ತೀರಿ?

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಿನ್ನೆ ನೀವು S.E.Z ಬಗ್ಗೆ convert ಮಾಡಿದ್ದೀರಿ. ಇದರ ಬಗ್ಗೆ ಏಕೆ ಪಕ್ಷಪಾತ? ದಯಮಾಡಿ ಇದನ್ನು convert ಮಾಡಿ.

ಅಧ್ಯಕ್ಷರು: ಇದರ ಬಗ್ಗೆ ಅನೇಕ ರೂಪದಲ್ಲಿ ಇದೇ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿದೆ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ತಾವು ಇದಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದು ಚರ್ಚೆಯಾಗಿದ್ದರೂ ಕೂಡ, ನಿರ್ದಿಷ್ಟವಾದ ಅಂಶಗಳ ಬಗ್ಗೆ ಚರ್ಚೆಯಾಗಿಲ್ಲ. ಅನೇಕ ಸಂದರ್ಭಗಳಲ್ಲಿ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇಬ್ಬರೂ ಹಿರಿಯ ನಾಯಕರು ಮಾತನಾಡುತ್ತಾರೆ. ದಯಮಾಡಿ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು: ನೀವು notice ಕೊಡಿ, ನಾನು ಅವಕಾಶವನ್ನು ಕೊಡುತ್ತೇನೆ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು convert ಮಾಡಿಕೊಡಿ.

ಅಧ್ಯಕ್ಷರು: ನಾನು ತಮಗೆ ಆಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ದಯಮಾಡಿ ಕುಳಿತುಕೊಳ್ಳಿ, ಮತ್ತೆ ಮತ್ತೆ ಅದನ್ನೇ ಚರ್ಚೆ ಮಾಡುವುದು ಬೇಡ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಿನ್ನೆ S.E.Z ಅನ್ನು convert ಮಾಡಿದ್ದೀರಲ್ಲಾ, ಅದೇ ರೀತಿಯಲ್ಲಿ ಇದನ್ನು ಮಾಡಿ.

ಅಧ್ಯಕ್ಷರು: ನಾನು ಸೂಚನೆಯನ್ನು ಕೊಟ್ಟಿದ್ದೇನೆ. ತಾವು ಮತ್ತೆ ಮತ್ತೆ ನೀವು ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ನಮ್ಮನ್ನು ಹೊರಗೆ ಹಾಕುತ್ತೀರಿ, ಮತ್ತೆ ಏನು ಮಾಡುತ್ತೀರಿ?

ಅಧ್ಯಕ್ಷರು: ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ನಿಯಮ 69ರ ಕೆಳಗೆ notice ಕೊಡಿ, ಇದು ನಿಯಮ 60ರ ಅಡಿಯಲ್ಲಿ ಬರುವುದಿಲ್ಲವೆಂದು ಹೇಳಿದರೂ ನೀವು ಮತ್ತೆ ಕತೆಯನ್ನು ಹೇಳುತ್ತಿದ್ದೀರಿ, ಇದು ಸರಿಯಲ್ಲ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ನಮ್ಮನ್ನು ಹೊರಗೆ ಹಾಕಬಹುದು, ಇದಕ್ಕಿಂತ ಹೆಚ್ಚಿಗೆ ನೀವು ಏನು ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಬಸವರಾಜ ರಾಯರೆಡ್ಡಿಯವರೆ, ಮಾತನಾಡಿ.

4. ನಿಯಮ 69ರ ಮೇಲೆ ಮುಂದುವರೆದ ಚರ್ಚೆ

ವಿಷಯ: ವಿಶೇಷ ಆರ್ಥಿಕ ವಲಯದ ಬಗ್ಗೆ (Special Economic Zone)

ಶ್ರೀ ಬಸವರಾಜ ರಾಯರೆಡ್ಡಿ:(ಯಲಬುರ್ಗಾ): ಮಾನ್ಯ ಅಧ್ಯಕ್ಷರೆ, ನಿಯಮ 69 ಮೇರೆಗೆ ವಿಶೇಷ ಆರ್ಥಿಕ ವಲಯದ ವಿಚಾರದಲ್ಲಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ದೇಶದಲ್ಲಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪನೆ ಮಾಡುವಂಥಾದ್ದು ಬಹಳ ಅವಶ್ಯಕವಿದೆ.

(ಈ ಹಂತದಲ್ಲಿ ಮಾನ್ಯ ಬಿ.ಆರ್. ಪಾಟೀಲ್ ಮತ್ತು ಮಾನ್ಯ ವೈಜನಾಥ್ ಪಾಟೀಲ್‌ರವರು ಸದನದ ಬಾವಿಗೆ ಬಂದು ಧರಣಿಗೆ ನಂತರು)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ.ಆರ್. ಪಾಟೀಲ್ ಮತ್ತು ಮಾನ್ಯ ವೈಜನಾಥ್ ಪಾಟೀಲ್‌ರವರು ಹಿರಿಯ ಸದಸ್ಯರಾಗಿದ್ದಾರೆ. ಅವರು ಏನು ಮನೆಗೆ ಕೇಳುತ್ತಾ ಇಲ್ಲ, ಕ್ಷೇತ್ರಕ್ಕೆ ಕೇಳುತ್ತಾ ಇಲ್ಲ. ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ದುಡ್ಡು ಬಿಡುಗಡೆ ಮಾಡುತ್ತಾ ಇಲ್ಲವೆಂದು ನಾವೇ ಹೇಳಿದ್ದೇವೆ. ಮಾನ್ಯ ಎಂ.ಪಿ.ಪ್ರಕಾಶ್‌ರವರೆ ಅನ್ಯಾಯವಾಗಿದೆಯೆಂದು ಹೇಳಿದ್ದಾರೆ. ಅದಕ್ಕೆ ಈ ಬಜೆಟ್‌ನಲ್ಲಿ They have not provided anything. ತಾವು ಏನೂ ಕೊಟ್ಟಿಲ್ಲ, ಅದಕ್ಕೆ ನಿಲುವಳಿ